ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,

ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 925/2024

ಸಾಕ್ಷಿಗೆ ದಿನಾಂಕ 06-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 9 P.W.: 4

| | | |
|---|---|---|
| ಹೆಸರು | : | ಫಕೀರಮ್ಮ |
| ಗಂಡನ ಹೆಸರು | : | ಟಿ ಮಂಜಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಎ ಎಸ್ ಐ |
| ವಾಸ ಸ್ಥಳ | : | ಕೂಡ್ಲಿಗಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 30-08-2023 ರಿಂದ 18-08-2024 ರವರೆಗೆ ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23-05-2024 ರಂದು ಸಂಜೆ 5 ಗಂಟೆ ಸಮಯದಲಿಲ ನಾನು ಎಸ್ ಹೆಚ್ ಓ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಣಾ ಗುನ್ನ ನಂ.58/2024 ರಂತೆ ಪ್ರ ವ ವರದಿ ದಾಖಲಿಸಿ ಮೇಲಾಧಿಕಾರಿಗಳಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ-2 ದೂರಿನಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ಅದೇ ದಿನ ಅಂದರೆ ದಿಃ25-03-2024 ರಂದು ಚಾಸಾ-1, 4, 5, 6, 7 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿಃ 29-03-2025 ರಂದು ಆರೋಪಿತನು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು ದಸ್ತಗಿರಿ ಕ್ರಮ ಜರುಗಿಸಿ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿಃ 06-04-2024 ರಂದು ಅಮಾನತುಪಡಿಸಿಕೊಂಡ ಮು ಮಾಲುಗಳನ್ನು ಎಫ್ ಎಸ್ ಎಲ್ ಗಾಗಿ ಚಾಸಾ-4 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ದಿಃ12-04-2024 ರಂದು ಚಾಸಾ-4 ರವರ ಮೂಲಕ ಎಫ್ ಎಸ್ ಎಲ್ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ದಿಃ02-05-2024 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಅದೇ ದಿನ ಅಂದರೆ ದಿಃ25-03-2024 ರಂದು ಚಾಸಾ-1 ರವರು ಠಾಣೆಗೆ ದೂರಿನ ಜೊತೆ ಪಂಚನಾಮೆ, ನಕಾಶೆ, ಮು ಮಾಲುಗಳನ್ನು ಸಹಾ ಹಾಜರುಪಡಿಸಿರುತ್ತಾರೆ. ದಿಃ25-03-2024 ರಂದು ಮು ಮಾಲುಗಳ ಕುರಿತು ಪಿ ಎಫ್ ನಂ.69/2024 ರಂತೆ ಮಾನ್ಯ ನ್ಯಾಯಾಲಯಕ್ಕೆ ಸ್ವತ್ತಿನ ಪಟ್ಟಿಯನ್ನು ಸಲ್ಲಿಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿಯು ಸದರಿ ಪಟ್ಟಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಮತ್ತು ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ದಿಃ 02-06-2024 ರಂದು ನಾನು ಚಾಸಾ-4 ರವರ ಮೂಲಕ ಎಫ್ ಎಸ್ ಎಲ್ ವರದಿ ಪಡೆದುಕೊಂಡಿರುತ್ತೇನೆ. ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಆರೋಪಿಯ ನ್ಯಾಯಾಲಯದ ಮುಂದೆ ಗೈರುಹಾಜರಾಗಿದ್ದು ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಮು ಮಾಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ-1 ರಿಂದ 5 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು. ಆರೋಪಿ ಪರ ಶ್ರೀ ಎ ಕೆ ವಕೀಲರಿಂದಃ-

ಚಾಸಾ-1 ರವರು ಯಾವ ದಿನಾಂಕದಂದು ಮತ್ತು ಎಷ್ಟು ಗಂಟೆಗೆ ಠಾಣೆಗೆ ಹಾಜರಾಗಿ ಪಿರ್ಯಾದನ್ನು ಬೆರಳಚ್ಚು ಮಾಡಿಸಿ ನಿಮಗೆ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ದಿಃ25-03-2024 ರಂದು ಸಂಜೆ 5 ಗಂಟೆ ಠಾಣೆಗೆ ಹಾಜರಾಗಿ ದೂರನ್ನು ನೀಡಿರುತ್ತಾರೆ. ಚಾಸಾ-1 ರವರು ದೂರನ್ನು ಎಲ್ಲಿ ಟೈಪ್ ಮಾಡಿಸಿರುತ್ತಾರೆಂದು ನನಗೆ ಗೊತ್ತಿಲ್ಲ ಆದರೆ ಅವರು ಟೈಪ್ ಮಾಡಿಸಿ ದೂರನುನ ತಂದಿದ್ದರು. ನಾನು 5 ಗಂಟೆ ಸಮಯದಲ್ಲಿ ಪ್ರ ವ ವರದಿ ದಾಖಲುಪಡಿಸಿಕೊಂಡಿರುತ್ತೇನೆ. ನಾನು ಅದೇ ದಿನ ಅಂದರೆ ದಿಃ25-03-2024 ರಂದು ಹೆಚ್ ಸಿ-130 ರವರ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಚಾಸಾ-1 ರವರು ಮು ಮಾಲುಗಳನ್ನು ನನ್ನ ಮುಂದೆ ಎಣಿಸಿ ನನಗೆ ನೀಡಿರುತ್ತಾರೆ. ಅದರಲ್ಲಿ ಓ ಟಿ ವಿಸ್ಕಿಯ 17 ಪೌಚು, 180 ಮಿಲಿಯ ಮ್ಯಾಕಿನ್ ಕೋಶ್ ವಿಸ್ಕಿಯ 23 ಪೌಚುಗಳು, 90 ಮಿಲಿಯ ಓ ಸಿ ವಿಸ್ಕಿಯ 96 ಪೌಚುಗಳು, 90 ಮಿಲಿಯ ಹೈವಾರ್ಡ್ಸ್ ವಿಸ್ಕಿಯ 91 ಪೌಚುಗಳು ಇದ್ದವು. ಪಂಚರ ಸಮಕ್ಷಮ ನನ್ನ ಮುಂದೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿರುವಂತಹ ಮದ್ಯದ ಪೌಚುಗಳನ್ನು ಹಾಜರುಪಡಿಸಿರುತ್ತಾರೆ. ಯಾವ ದಿನಾಂಕದಂದು ನೀವು ಎಫ್ ಎಸ್ ಎಲ್ ಪರೀಕ್ಷೆಗಾಗಿ ಮು ಮಾಲುಗಳನ್ನು ಕಳುಹಿಸಿಕೊಟ್ರಿ ಎಂದರೆ ಸಾಕ್ಷಿಯು ದಿಃ06-04-2024 ರಂದು ಕಳುಹಿಸಿಕೊಟ್ಟಿರುತ್ತೇನೆ ಎನ್ನುತ್ತಾರೆ. ಸದರಿ ಎಫ್ ಎಸ್ ಎಲ್ ವರದಿಗಾಗಿ ಕಳುಹಿಸಿಕೊಡುವ ಬಗ್ಗೆ ಮಾಡಿರುವಂತಹ ಮನವಿ ಪತ್ರದ ಪ್ರತಿಯನ್ನು ಅಂತಿಮ ವರದಿಯಲ್ಲಿ ಹಾಜರುಪಡಿಸಿಲ್ಲ. ದಿಃ 25-03-2024 ರಂದು ಚಾಸಾ-1, 4 ರಿಂದ 7 ರವರ ಹೇಳಿಕೆ

ಪಡೆದಿದ್ದೇನೆ ನಾನು ಆ ರೀತಿ ಹೇಳಿಕೆ ಪಡೆದಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗೂ ಮು ಮಾಲಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಚಾಸಾ-1 ರವರು ಅಂಕಿ ಸಂಖ್ಯೆ ಸಲುವಾಗಿ ಒಂದು ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದು ಚಾಸಾ-1 ರವರು ನನ್ನ ಮೇಲಾಧಿಕಾರಿಗಳಾಗಿರುವುದರಿಂದ ಅವರು ದಾಖಲಿಸಿರುವ ಸುಳ್ಳು ಪ್ರಕರಣಕ್ಕೆ ನಾನು ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ